ಬೀಳಗಿ ಕ್ಷೇತ್ರದಲ್ಲಿ ನೀರಾವರಿ ಯೋಜನೆ.

೧೪೩೧. ಶ್ರೀ ಬಾಬುರೆಡ್ಡಿ ವೆಂ. ತಂಗಳ (ಬೀಳಗಿ).—ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೧ ರಿಂದ ಇಲ್ಲಿಯವರೆಗೆ ಜಮಖಂಡಿ ತಾಲ್ಲೂಕಿನ ೩೩ ಹಳ್ಳಿಗಳನ್ನೊಳಗೊಂಡ ಬೀಳಗಿ ಕ್ಷೇತ್ರದಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ?

ಆ) ಇವುಗಳಲ್ಲಿ ನಿಗಧಿತವಾಗಿ ಪೂರ್ತಿಗೊಂಡ ಯೋಜನೆಗಳೆಷ್ಟು ? (ವಿವರ ಒದಗಿಸುವುದು)

ಇ) ಇವುಗಳಿಗಾಗಿ ಖರ್ಚು ಮಾಡಿರುವ ಒಟ್ಟು ಹಣ ವೆಷ್ಟು ?

ಈ) ಈ ಎಲ್ಲಾ ಯೋಜನೆಗಳಿಂದ ನೀರಾವರಿ ಪ್ರಯೋಜನ ಪಡೆದಿರುವ ಪ್ರದೇಶ ಎಷ್ಟು ?

ಉ) ಪ್ರಸಕ್ತ ವರ್ಷ ಎಷ್ಟು ಯಾತ ನೀರಾವರಿ ಹಾಗೂ ನೀರಾವರಿ ಕೆರೆಗಳ ನಿರ್ಮಾಣ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೭

ಆ) ಒಂದು. ಯಾವುದೆಂದರೆ ಸಾವಳಗಿ ಗ್ರಾಮದ ರೇವಣ ಸಿದ್ದಪ್ಪ ದೇವಸ್ಥಾನದ ಹತ್ತಿರ ಕುರುಗೋಳ ಹಳ್ಳಕ್ಕೆ ಬಾಂದಾರ ಕೆಲಸ.

ಇ) ೫೭,೭೮೭ ರೂಪಾಯಿಗಳು (ಪೂರ್ತಿಯಾದ ಬಾಂದಾರದ ಕೆಲಸಕ್ಕೆ)

೩.೩೧ ಲಕ್ಷ ರೂಪಾಯಿಗಳು (ಎಲ್ಲಾ ಏಳು ಕೆಲಸಗಳಿಗೆ)

ಈ) ೪೯ ಹೆಕ್ಟೇರುಗಳು.

ಉ) ೧೯೮೬-೮೭ರ ಆಯವ್ಯಯದಲ್ಲಿ ಒಂದು ಸಣ್ಣ ನೀರಾವರಿ ಕೆರೆ ಮತ್ತು ಒಂದು ಏತ ನೀರಾವರಿ ಯೋಜನೆಗಳನ್ನು ಸೇರಿಸಲಾಗಿದೆ.

ಗಂಗಾವತಿ ತಾಲ್ಲೂಕಿನಲ್ಲಿ ಕಾಲುವೆ ಮತ್ತು ರಸ್ತೆಗಳ ನಿರ್ಮಾಣದ ಬಗ್ಗೆ.

೧೪೧೨. ಶ್ರೀ ಶ್ರೀರಂಗ ದೇವರಾಯಲು (ಕನಕಗಿರಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ತಾಲ್ಲೂಕಿನಲ್ಲಿ ಕಾಲುವೆ ಮತ್ತು ರಸ್ತೆಗಳ ನಿರ್ಮಾಣಕ್ಕಾಗಿ ಸುಮಾರು ೨೫ ವರ್ಷಗಳ ಹಿಂದಿನಿಂದಲೂ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ಧನ ಈವರೆಗೂ ಮಂಟ್ಟದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಪರಿಹಾರ ಧನವನ್ನು ಯಾವಾಗ ಕೊಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ನಿಯಮಾವಳಿ ಪ್ರಕಾರ ಪ್ರಕರಣಗಳ ನಿಷ್ಕರ್ಷೆಯಾದಂತೆ ಪರಿಹಾರವನ್ನು ನೀಡಲಾಗುವುದು

ತುಂಗಭದ್ರಾ ನದಿಯ ನೀರನ್ನು ಕೋಲಾರ ಜಿಲ್ಲೆಯಲ್ಲಿ ಹರಿಯುವ ನದಿಗಳಿಗೆ ಕೂಡಿಸುವ ಯೋಜನೆ.

೧೪೨೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?